**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಟಿ.ಎನ್.ಜವರಾಯಿಗೌಡ ಇವರು ನಿಯಮ 330 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ:-**

ರಾಜ್ಯ ಉಚ್ಛ ನ್ಯಾಯಾಲಯದ ಆದೇಶಗಳಿದ್ದರೂ ಸಹ ಅಕ್ರಮ ಜಾಹೀರಾತು ಫಲಕ ಅಳವಡಿಕೆ ತಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಿಫಲವಾಗಿದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ನನ್ನಲ್ಲಿರುವ ಮಾಹಿತಿ ಪ್ರಕಾರ ಸುಮಾರು 110 ಅಧಿಕೃತ ಮತ್ತು 2621 ಅನಧಿಕೃತ ಜಾಹೀರಾತು ಏಜೆನ್ಸಿಗಳಿವೆ. ಇವರಿಂದ ಬಿಬಿಎಂಪಿಗೆ ಸುಮಾರು 646 ಕೋಟಿ ರೂ ಬಾಕಿ ಶುಲ್ಕ ಬರಬೇಕಾಗಿದೆ. ನ್ಯಾಯಾಲಯದ ಆದೇಶವಿದ್ದರೂ ಸಹ ಅನಧಿಕೃತ ಫ್ಲೆಕ್ಸ್ ಬ್ಯಾನರ್ ಮತ್ತು ಹೋರ್ಡಿಂಗ್ಸ್‌ಗಳ ಅಳವಡಿಕೆ ಮಾಡಿದವರ ವಿರುದ್ಧ ಕ್ರಮ ಜರುಗಿಸಿಲ್ಲ. ಈ ಅನಧಿಕೃತದಾರರು ಪಾಲಿಕೆಯ ಅಧಿಕಾರಿಗಳನ್ನು ಒಳ ಹಾಕಿಕೊಂಡು ಪಾಲಿಕೆಗೆ ಬರಬೇಕಾದ ಸಾವಿರಾರು ಕೋಟಿ ಅದಾಯವನ್ನು ಲೂಟಿ ಮಾಡಿದ್ದಾರೆ. ನಗರದ ಸೌಂದರ್ಯಕ್ಕೆ ಧಕ್ಕೆ ತರುವ ಅಪಘಾತಗಳಿಗೆ ಕಾರಣವಾಗಲಿರುವ ಹೊಸ ನೀತಿಯನ್ನು ಜಾರಿಗೆ ತರಲು ಮುಂದಾಗಿರುವುದು ಕಾನೂನು ಬಾಹಿರ ಕೂಡಲೇ ಇದನ್ನು ರದ್ದುಪಡಿಸಬೇಕು. ಪಾಲಿಕೆಗೆ ನಯಾಪೈಸೆ ಆದಾಯವಿಲ್ಲದಿದ್ದರೂ ಜಾಹೀರಾತು ಮಾಫಿಯಾದ ಒತ್ತಡಕ್ಕೆ ಮಣಿದು ಹೊಸ ನೀತಿ ಜಾರಿಗೆ ತರಲು ಹೊರಟಿರುವುದು ದುರಂತದ ಸಂಗತಿ. ಈ ನೀತಿಯನ್ನು ಕೂಡಲೇ ಹಿಂಪಡೆಯಬೇಕು ಎಂಬ ಕುರಿತು.

**ಉತ್ತರ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತು ಫಲಕ ಸೇರಿದಂತೆ ಎಲ್ಲಾ ವಿವಿಧ ರೀತಿಯ ಜಾಹೀರಾತು ಪ್ರಕಟಣೆಗಳನ್ನು ದಿನಾಂಕ:06.08.2018 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ ಸಂಖ್ಯೆ:62/2018-19ರನ್ವಯ ನಿಷೇಧಿಸಲಾಗಿರುತ್ತದೆ. 2018ರ ಸಾಲಿನಿಂದ ಯಾವುದೇ ಜಾಹೀರಾತು ಏಜೆನ್ಸಿಗಳ ನೋಂದಣಿ ನವೀಕರಣವನ್ನು ಮಾಡಿರುವುದಿಲ್ಲ.

ಮುಂದುವರೆದು, ಪಾಲಿಕೆ ವ್ಯಾಪ್ತಿಯಲ್ಲಿ ಜಾಹೀರಾತು ಹಕ್ಕುಗಳ ಎದುರಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಯೋಜನೆಯಲ್ಲಿ ಬಸ್ ತಂಗುದಾಣಗಳು, ಪಾದಚಾರಿ ಮೇಲ್ಸೇತುವೆಗಳು, ಸಾರ್ವಜನಿಕ ಶೌಚಾಲಯಗಳು ಮುಂತಾದವುಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ವಾಣಿಜ್ಯ ಜಾಹೀರಾತು ಪ್ರದರ್ಶಿಸಲು ವಿವಿಧ ಸಂಸ್ಥೆಗಳಿಗೆ ಅನುಮತಿಯನ್ನು ನೀಡಲಾಗಿರುತ್ತದೆ. ಸದರಿ ಸಂಸ್ಥೆಗಳಿಗೆ ವಾರ್ಷಿಕ ನೆಲಬಾಡಿಗೆ, ಜಾಹೀರಾತು ಶುಲ್ಕ ಹಾಗೂ ಇನ್ನಿತರೆ ಶಾಸನಬದ್ಧ ತೆರಿಗೆಗಳು ಸೇರಿದಂತೆ ಒಟ್ಟು ರೂ.335.67 ಕೋಟಿಗಳನ್ನು ಪಾವತಿಸುವಂತೆ ಡಿಮ್ಯಾಂಡ್ ನೋಟೀಸ್ ಜಾರಿಗೊಳಿಸಿದ್ದು, ರೂ.293.52 ಕೋಟಿಗಳನ್ನು ಬಾಕಿ ಉಳಿಸಿಕೊಂಡಿರುತ್ತಾರೆ.

ಸದರಿ ಮೊತ್ತದ ವಸೂಲಾತಿಗೆ ಸಂಬಂಧಿಸಿದಂತೆ ಡಿಮ್ಯಾಂಡ್ ನೋಟೀಸ್‌ಗಳನ್ನು ಜಾಹೀರಾತು ಏಜೆನ್ಸಿಗಳಿಗೆ ಜಾರಿಗೊಳಿಸಲಾಗಿರುತ್ತದೆ. ಜಾರಿಗೊಳಿಸಿರುವ ಡಿಮ್ಯಾಂಡ್ ನೋಟೀಸ್‌ಗಳಿಗೆ ಮಾನ್ಯ ಉಚ್ಛ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು, ಸದರಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

. . .2.

ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:17225/2022 ರಲ್ಲಿ ದಿನಾಂಕ:28.08.2023ರ ಆದೇಶದಲ್ಲಿ ಸೂಕ್ತ ಜಾಹೀರಾತು ನೀತಿಯನ್ನು ರಚಿಸುವಂತೆ ಪಾಲಿಕೆಗೆ ನಿರ್ದೇಶನ ನೀಡಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣ ಸಂಖ್ಯೆ:W.P(Civil) No.13029/1985 ರಲ್ಲಿ ದಿನಾಂಕ:03.08.2017ರ ಆದೇಶದಲ್ಲಿ ನವದೆಹಲಿ ಮಹಾನಗರ ಪಾಲಿಕೆ ಜಾಹೀರಾತು ನೀತಿಯನ್ನು ಅನುಮೋದಿಸಿರುವುದರಿಂದ ಅದೇ ಮಾದರಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳು-2024 ಅನ್ನು ರೂಪಿಸಲಾಗಿರುತ್ತದೆ.

ಪಾಲಿಕೆ ವ್ಯಾಪ್ತಿಯಲ್ಲಿ ವಾಣಿಜ್ಯ ಹಾಗೂ ಸ್ವಯಂ ಜಾಹೀರಾತುಗಳನ್ನು ತರ್ಕಬದ್ಧ, ಪಾರದರ್ಶಕ ಮತ್ತು ನಿಯಂತ್ರಕ ವ್ಯವಸ್ಥೆಯಲ್ಲಿ ಒಳಪಡಿಸುವ ನಿಟ್ಟಿನಲ್ಲಿ ರಚಿಸಲಾಗಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಾಹೀರಾತು ಉಪವಿಧಿಗಳು, 2024 ಅನ್ನು ಸರ್ಕಾರದಿಂದ ಅನುಮೋದಿಸಲಾಗಿದೆ. ಈ ಕರಡು ಉಪವಿಧಿಗಳನ್ನು ರಿಟ್ ಅರ್ಜಿ ಸಂಖ್ಯೆ: 57990/2017 ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಗಮನಕ್ಕೆ ತರಲಾಗಿದೆ. ಸದರಿ ಉಪವಿಧಿಗಳು ಜಾರಿಗೆ ಬಂದ ನಂತರ ಪಾಲಿಕೆಯ ಆದಾಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸಲು ಬಹಿರಂಗ ಹರಾಜಿನ (ಟೆಂಡರ್) ಮೂಲಕ ಪರವಾನಿಗೆಯನ್ನು ನೀಡಲು ಕ್ರಮ ವಹಿಸಲಾಗುವುದು.

ಸಂಖ್ಯೆ: ನಅಇ 110 ಎಂಎನ್‌ಯು 2025

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ